ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ
ಈ ಸಂಜೆ

ಪರಿಸರ ಸಂರಕ್ಷಣೆಗೆ ಎಲ್ಲರೂ ಜೊತೆಗೂಡಿ: ರಾಜ್ಯಪಾಲರ ಕರೆ

ಮಹದೇವಪುರ, ಆ. 22- ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಪರಿಸರ ಸಂರಕ್ಷಣೆಗೆ ಮುಂದಾಗುವ ಮೂಲಕ ಜಾಗತಿಕ ತಾಪಮಾನ ಹಾಗೂ ಮಾಲಿನ್ಯ ನಿಯಂತ್ರಣಕ್ಕೆ ಕೈಜೋಡಿಸಬೇಕು ಎಂದು ರಾಜ್ಯಪಾಲರಾದ ಥಾವರ್ ಚೆಂದ್ ಗೆಹ್ಲೋಟ್ ತಿಳಿಸಿದರು.

ಕ್ಷೇತ್ರದ ಕುಂದಲಹಳ್ಳಿಯ ಸಿಎಂಆರ್ ಸಮೂಹ ಸಂಸ್ಥೆಯಲ್ಲಿ ಆಯೋಜಿಸಿದ ಇಕೋ ಯೂತ್ ಪ್ರಾರಂಭಕ್ಕೆ ಎಕೋ ಯೂತ್ ಸ್ಮಾರ್ಟ್ ಆಪ್ ಸ್ಪರ್ಧೆ ಸಮ್ಮೇಳನಕ್ಕೆ ಚಾಲನೆ ನೀಡಿ ವಿದ್ಯಾರ್ಥಿಗಳನ್ನು ಉದ್ದೇಶಿ ಮಾತನಾಡಿದರು. ಪರಿಸರ ಸಂರಕ್ಷಣೆಯಲ್ಲಿ ಯುವಕರು ಪಾತ್ರ ಬಹುಮುಖ್ಯ, ಜಾಗತಿಕ ತಾಪಮಾನ, ವಾಯು ಮಾಲಿನ್ಯ, ಜಲ ಮಾಲಿನ್ಯ, ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ಪ್ರತಿಯೊಬ್ಬರು ಮುಂದಾಗುವ ಮೂಲಕ ಪರಿಸರ ಉಳಿಸಬೇಕು ಎಂದರು.

ವಿದ್ಯಾಭ್ಯಾಸದ ನಂತರ ವಿದ್ಯಾರ್ಥಿಗಳು ಮುಂದಿನ ಜೀವನಕ್ಕಾಗಿ ಸ್ವಂತ ಕಂಪನಿಗಳು ಅಥವಾ ಕೆಲಸಗಳನ್ನು ಶುರು ಮಾಡುತ್ತಾರೆ, ಅದು ಪರಿಸರ ಪೂರ್ವಕವಾದ ಸಂಸ್ಥೆಯಾಗಿ ಪ್ಲಾಸ್ಟಿಕ್ ಬಳಕೆ ಇಲ್ಲದೆ, ಪರಿಸರ ಸ್ನೇಹಿ ವಸ್ತುಗಳ ಉತ್ಪಾದನೆ ಹಾಗೂ ಬಳಕೆಯಾಗಬೇಕು, ರಾಷ್ಟ್ರ ಮಟ್ಟದಲ್ಲಿ ಪರಿಸರ ಸ್ನೇಹಿ ಉದ್ಯೋಗ ಸೃಷ್ಟಿ ಜೊತೆಗೆ ಪರಿಸರ ಸಂರಕ್ಷಣೆ ಮಾಡುವ ಜವಾಬ್ದಾರಿ ನಾವು ಹೊತ್ತಿದ್ದಂತೆ ಎಂದರು.

ರಾಜ್ಯಸಭೆಯ ಮಾಜಿ ಸದಸ್ಯರು, ಸಿಎಂಆರ್ ಸಂಸ್ಥೆಗಳ ಸಮೂಹದ ಚರ್ಮನ್ ಕೆ. ಸಿ. ರಾಮಮೂರ್ತಿ ಅವರು ಮಾತನಾಡಿ, ''ಸ್ಪರ್ಧೆಯಲ್ಲಿ ದೇಶದ ಹಲವಾರು ಕಡೆಗಳ ಯುವಜನತೆ ಸಕ್ರಿಯವಾಗಿ ತೊಡಗಿಸಿಕೊಳ್ಳುವುದರೊಂದಿಗೆ ಎಕೊ ಯೂತ್ ಸ್ಟಾರ್ಟ್‌ಅಪ್ ಸಂಸ್ಥೆ ಅದ್ಭುತ ಯಶಸ್ಸು ಕಂಡಿದೆ.

ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿನಲ್ಲಿ 'ಎಕೊ ಯೂತ್ ಸ್ಟಾರ್ಟ್‌ಅಪ್ ಸ್ಪರ್ಧೆ ಮತ್ತು ಶೃಂಗಸಭೆ 2022'ರ ಆತಿಥ್ಯ ವಹಿಸಲು ನಾವು ಹೆಮ್ಮೆ ಪಡುತ್ತೇವೆ. ಇದು ಅದ್ಭುತ ವೇದಿಕೆಯಾಗಿದ್ದು, ಸ್ಟಾರ್ಟ್‌ಅಪ್ ಸಾಹಸಿ ಸಂಸ್ಥೆಗಳನ್ನು ರಚಿಸುವಲ್ಲಿ ನೂತನ ಮಾರ್ಗಗಳನ್ನು ತೆರೆಯಲಿದೆ ಎಂಬ ಖಾತ್ರಿ ನನಗಿದೆ. ನಮ್ಮ ದೇಶದಲ್ಲಿ ಯುವ ಜನತೆ ತಮ್ಮ ಶಕ್ತಿಗಳನ್ನು ಶುದ್ಧ ಶಕ್ತಿಗಾಗಿ ಬಳಸಿ ಶ್ರಮಿಸುತ್ತಿದ್ದಾರೆ.

ಆದರೆ, ಈ ಎನರ್ಜಿ ಸ್ಟಾರ್ಟ್‌ಅಪ್‌ಗಳಿಗೆ ಹಣಕಾಸು ಬೆಂಬಲದ ಕೊರತೆ ಇದೆ. ಹವಾಮಾನ ಬದಲಾವಣೆ ವಿರುದ್ಧ ನಾವು ಹೋರಾಡುವಲ್ಲಿ ಯುವಜನತೆಯ ಶಕ್ತಿ ಭಾರತದ ಪರವಿದೆ. ಹೆಚ್ಚು ಹಸಿರಾದ ಮತ್ತು ಆರೋಗ್ಯಕರ ಭಾರತವನ್ನು ದೃಢಪಡಿಸಿಕೊಳ್ಳಲು ಯುವಜನತೆಗೆ ಬೆಂಬಲ ನೀಡುವಂತಹ ನೀತಿ ಬದಲಾವಣೆಗಳನ್ನು ಮಾಡುವ ಅಗತ್ಯ ನಮಗಿದೆ' ಎಂದರು.

ಯುನೆಸ್ಕೊ ಎಂಜಿಐಇಪಿನ ''ಜಾಗತಿಕ ದಯಾ ರಾಯಭಾರಿಯಾದ'' ರಿಕಿ ಕೇಜ್ ಅವರು ಈ ಉಪಕ್ರಮವನ್ನು ಬೆಂಬಲಿಸಿ ಮಾತನಾಡಿ, ''ಮೂಲವಾಗಿ ಸುಸ್ಥಿರವಾಗಿರುವುದಕ್ಕೆ ಸ್ಟಾರ್ಟ್‌ಅಪ್‌ಗಳಿಗೆ ಬಹುಮಾನವನ್ನು ನೀಡಲಾಗುವ ಅದ್ಭುತವಾದ ಉಪಕ್ರಮ ಈ ಕಾರ್ಯಕ್ರಮವಾಗಿದೆ. ಹವಾಮಾನ ಬದಲಾವಣೆ, ಪ್ರಭೇಧಗಳ ನಶಿಸುವಿಕೆ, ಅರಣ್ಯ ನಾಶ, ಪ್ಲಾಸ್ಟಿಕ್‌ಗಳು, ಮಾಲಿನ್ಯ, ವಾಯು ಮಾಲಿನ್ಯ ಅಥವಾ ಇತರೆ ಸಮಸ್ಯೆಗಳು ಸೇರಿದಂತೆ ನಮ್ಮ ಗ್ರಹದ ಎಲ್ಲಾ ತೊಂದರೆಗಳಿಗೆ ಮುಖ್ಯ ಪರಿಹಾರ ಎಂದರೆ ಈ ಸಮಸ್ಯೆಗಳನ್ನು ತಾವಾಗಿಯೇ ಪರಿಹರಿಸಿಕೊಳ್ಳುವುದಾಗಿದೆ. ಈ ಯುವ ಜನತೆ ವಿಶೇಷವಾಗಿ ಸ್ಟಾರ್ಟ್‌ಅಪ್‌ಗಳ ಮೂಲಕ ಇದರ ನೇತೃತ್ವ ವಹಿಸಿದ್ದಾರೆ. ಏಕೆಂದರೆ ನಾವು ಎದುರಿಸುವ ಪರಿಸರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಈ ಯುವ ಜನತೆ ಹೆಚ್ಚಿನ ಪಾಲು ಹೊಂದಿರುತ್ತಾರೆ. ನಮ್ಮ ಪರಿಸರ ಸಂರಕ್ಷಿಸಲು ಮತ್ತು ನಮ್ಮ ಮುಂದಿನ ಪೀಳಿಗೆಗಳಿಗೆ ಹೆಚ್ಚು ಉತ್ತಮವಾದ ಭವಿಷ್ಯವನ್ನು ಹೊಂದುವುದರ ಖಾತ್ರಿ ಮಾಡಿಕೊಳ್ಳಲು ಅಂತಹ ಅದ್ಭುತ ಚಿಂತನೆಗಳೊಂದಿಗೆ ಅನೇಕ ಸ್ಟಾರ್ಟ್‌ಅಪ್‌ಗಳು ಬರುತ್ತಿರುವುದನ್ನು ನೋಡಿ ನಾನು ರೋಮಾಂಚನಗೊಂಡಿದ್ದೇನೆ'' ಎಂದರು.

ಇದಕ್ಕೂ ಮುನ್ನ ಕಾಲೇಜು ಅಂಗಳದಲ್ಲಿ ಸಸಿ ನೆಟ್ಟು ನೀರೆರದ್ದರು, ಪರಿಸರವಾದಿ, ಸಂಗೀತ ನಿರ್ದೇಶಕ ರಿಕ್ಕಿ ಕೇಜ್, ಟ್ರಿಸ್ಟಾ ರಾಮಮೂರ್ತಿ ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.